

ಕ್ರಿಕೆಟ್ ಆಟಕ್ಕೆ ಹೋಗುವ ವಿಷಯ ಇರಲಿ, ಅವನಿಗೆ ನನ್ನ ಜೊತೆ ಬೇಕು. ನನಗೂ ಅವನಂದ್ರೆ ಏನೋ ಆತ್ಮೀಯತೆ. ನನ್ನ ಜೊತೆ ಬೇರೆ ಸ್ನೇಹಿತರಿದ್ದರೆ ಇವನು ಹೆಚ್ಚು ಹೊತ್ತು ನಿಲ್ಲದೆ ಹೊರಟುಬಿಡುತ್ತಿದ್ದ. ಇನ್ನು ಅಲ್ಲಿ ನೋಡಿಕೊಳ್ಳೋಕೆ ಹೊಲ, ಮನೆ, ಆಸ್ತಿ ಇದೆಯೆನೋ ಅನ್ನುವ ಹಾಗೆ ಅಪ್ಪ–ಅಮ್ಮ ದಾವಣಗೆರೆಯಲ್ಲೇ ಉಳಿದಿದ್ದರೂ ನಾನು ನೆಮ್ಮದಿಯಿಂದ ಇರುವುದು ಶಂಕರ ಅಲ್ಲಿಯೇ ಇದ್ದಾನೆ ಅನ್ನುವ ಧೈರ್ಯದಿಂದಲೇ. ನನ್ನ ಅವನ ಬಾಂಧವ್ಯ ವಿಶೇಷವಾದದ್ದೇ. ಸ್ಕೂಲ್ ಅಥವಾ ಕಾಲೇಜ್ ದಿನಗಳಲ್ಲಿ ಯಾರ ಜೊತೆಯಾದರೂ ನನ್ನ ಜಗಳ ನಡೆಯುತ್ತಿದ್ದರೆ ಶಂಕರ ಹಿಂದೆಮುಂದೆ ನೋಡದೇ ನನ್ನ ಪಕ್ಷವೇ. ಜಗಳ ಕೈ ಕೈ ಮಿಲಾಯಿಸುವ ಲೆಕ್ಕಕ್ಕೆ ಹೋದರೆ ಇವನು ಎದುರಿನವರು ಯಾರು ಏನು ಅಂತ ನೋಡದೆ ಮೇಲೆ ಬೀಳುತ್ತಿದ್ದ. ಎಷ್ಟೋ ಸಾರಿ ರಸ್ತೆಯಲ್ಲಿ ಬಿದ್ದು ಉರುಳಾಡುವಂತಹ ಹೊಡೆದಾಟಗಳನ್ನು ನನ್ನ ಪರವಾಗಿ ಮಾಡಿದ್ದ.

ಶಂಕರನ ನೆನಪುಗಳೇ ಹಾಗೇ, ಶಂಕರನೇ ಹಾಗೆ. ಆರಡಿ ಎತ್ತರದ ಸ್ಫುರದ್ರೂಪಿ. ಶಕ್ತಿವಂತ. ಧೈರ್ಯವಂತ. ಧೈರ್ಯ ಅಂದರೆ ಅದು ಸಾಮಾನ್ಯ ಧೈರ್ಯವಲ್ಲ ಅಥವಾ ಬರಿಯ ತೋಳ್ಬಲ ಇದೇ ಎನ್ನುವ ಕಾರಣಕ್ಕೆ ಬರುವ ಹುಂಬತನದ ಧೈರ್ಯವಲ್ಲ. ಎಂತಹ ಸನ್ನಿವೇಶದಲ್ಲೂ ಹೆದರಿಕೆ ಅನ್ನೋದೆ ತಿಳಿಯದೇ ಇರುವ ಕೆಚ್ಚೆದೆ.

ಇನ್ನೂ ನನಗೆ ಸ್ಪಷ್ಟ ನೆನಪಿರೋ ಹಾಗೆ ನನ್ನ ವಿದ್ಯಾಭ್ಯಾಸ ಮುಗಿದು ಬೆಂಗಳೂರಲ್ಲಿ ಕೆಲಸಕ್ಕೆ ಸೇರಿದ ಹೊಸತು. ರಜೆಗೆ ಊರಿಗೆ ಹೋಗಿದ್ದೆ. ಪುಣೆಯಲ್ಲಿ ವಾಸವಿರುವ ಶ್ರಾವಣಿ ಅಕ್ಕನ ಮಗ ಅಶ್ವಿನ್ ದಾವಣಗೆರೆಯಲ್ಲಿ ಮೆಡಿಕಲ್ ಸೀಟ್ ಸಿಕ್ಕಿ ಹಾಸ್ಟೆಲ್ ಸೇರಿ ಒಂದು ವಾರ ಆಗಿತ್ತೇನೋ. ಇದ್ದಕ್ಕಿದ್ದಂತೆ ಮನೆಗೆ ಬಂದ. ಸ್ನೇಹಿತರೊಡನೆ ಮನೆ ಕಟ್ಟೆಯ ಮೇಲೆ ಕುಳಿತು ಹರಟುತ್ತಿದ್ದೆ. ಶಂಕರನೂ ಇದ್ದ. ಅಶ್ವಿನ್‌ನ ಮುಖ ಬಾಡಿದ್ದು ಗಮನಿಸಿ ಏನಾಯಿತು ಅಂತ ವಿಚಾರಿಸಿದರೆ, ಹಾಸ್ಟೆಲ್‌ನಲ್ಲಿ ಸೀನಿಯರ್‌ಗಳು ರ್‍ಯಾಗಿಂಗ್ ಮಾಡಿದ್ದಲ್ಲದೇ, ಸಿಗರೇಟ್‌ನಿಂದ ಚುಚ್ಚಿ ಗಾಯ ಮಾಡಿದ್ದರು. ನೋಡಿ ನನಗೆ ಕಣ್ಣು ಹನಿಗೂಡಿದವು. ಮುಂದೆ ಏನು ಮಾಡ್ಬೇಕು ಅಂತ ಯೋಚನೆ ಮಾಡುತ್ತಿರುವಾಗಲೇ ಶಂಕರನ ಧ್ವನಿ – 'ಯಾವನೋ ಅವನು ಬೋಳಿಮಗ ಹೀಗೆ ಮಾಡಿರೋದು. ಹತ್ತು ಗಾಡೀನ'. ಅಶ್ವಿನ್‌ನನ್ನು ಗಾಡಿಯಲ್ಲಿ ಕೂಡಿಸಿಕೊಂಡು ಹೊರಟೇ ಹೋಗಿದ್ದ.

ಶಂಕರನ ಸ್ವಭಾವ ತಿಳಿದಿದ್ದ ನಾನು ಏನು ಅನಾಹುತ ಮಾಡಿಬಿಡುತ್ತಾನೋ ಅನ್ನಿಸಿ ಇನ್ನೊಂದಿಬ್ಬರು ಹುಡುಗರನ್ನು ಕರಕೊಂಡು ಗಾಡಿಯಲ್ಲಿ ಹೋಗುವುದರೊಳಗೆ, ಒಂದಿಬ್ಬರು ಹುಡುಗರನ್ನು ಒಂದು ಮೂಲೆಗೆ ಹಾಕಿಕೊಂಡು ಅಕ್ಷರಶಃ ಕುಂಬಾರ ಮಡಿಕೆ ಮಾಡೊಕೆ ಮಣ್ಣು ತುಳಿಯುವ ಹಾಗೆ ತುಳೀತಿದ್ದ. ನಾವು ತಲುಪೋದು ಇನ್ನೊಂದು ಸ್ವಲ್ಪ ತಡವಾಗಿದ್ದರೆ ಆ ಹುಡುಗರ ಗತಿ ಏನಾಗುತ್ತಿತ್ತೊ ಆ ದೇವರೆ ಬಲ್ಲ. ಅಷ್ಟರಲ್ಲೇ ವಾರ್ಡನ್ ಮೂಲಕ ಸುದ್ದಿ